**ಸಾಕ್ಷಿಗೆ ದಿನಾಂಕಃ 08.07.2026 ರಂದು ಪ್ರಮಾಣ ಮಾಡಿಸಲಾಯಿತು.**

**<u>ಮುಖ್ಯ ವಿಚಾರಣೆಃ ಶ್ರೀ. ಬಿ.ಎಮ್.ಎಸ್. ವಕೀಲರಿಂದಃ</u>**

ಇಂದು ನಾನು ನನ್ನ ಸಾಕ್ಷಿಯ ವಿಚಾರಣೆ ಕುರಿತಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸತ್ಯವಾಗಿರುತ್ತದೆ ಅದನ್ನು ನಾನೇ ನಮ್ಮ ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ ಮತ್ತು ಅದಕ್ಕೆ ಸಹಿ ಹಾಕಿರುತ್ತೇನೆ.

ದಿನಾಂಕಃ08.01.2021ರ ಮೂಲ ಕರಾರು ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು **ನಿ.ಪಿ.1** ಎಂದು, ಸಾಕ್ಷಿಯು ನಿ.ಪಿ.1ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.1(ಎ)** ಎಂದು, ಸಾಕ್ಷಿಯು ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.1(ಬಿ)** ಎಂದು, ತಿಳುವಳಿಕೆ ನೋಟೀಸನ್ನು ಹಾಜರು ಪಡಿಸಿದ್ದು, ಅದನ್ನು **ನಿ.ಪಿ.2** ಎಂದು, ಆರ್.ಪಿ.ಎ.ಡಿ. ರಸೀದಿಯನ್ನು ಹಾಜರು ಪಡಿಸಿದ್ದು, ಅದನ್ನು **ನಿ.ಪಿ.3** ಎಂದು, ಸರ್ವೆ ನಂಃ30/3ರ ರ ಆರ್.ಟಿ.ಸಿ.ಯನ್ನು ಹಾಜರು ಪಡಿಸಿದ್ದು, ಅದನ್ನು **ನಿ.ಪಿ.4** ಎಂದು ಗುರುತಿಸಲಾಯಿತು.

(ಪ್ರತಿವಾದಿ ಏಕಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ**